ಈ ವ್ಯವಸ್ಥೆ ಅನ್ನುವುದು ಹೇಳಿಕೆ. ಆದರೆ ಗಂಡಸರು ಬೂದುಗುಂಬಳಕಾಯಿ ಕುಯ್ದರೆ ಯಾಕೆ ದೋಷ ಸುತ್ತಿಕೊಳ್ಳುತ್ತಿರಲಿಲ್ಲ, ಅವರಿಗೆ ಪಾಪ ಅಂಟಿಕೊಳ್ಳುತ್ತಿರಲಿಲ್ಲ ಎಂದು ಕೇಳುವಷ್ಟು ದಾಷ್ಟೀಕತನ, ಅಥವಾ ತಿಳಿವಳಿಕೆ ಹೆಂಗಸರಿಗೆ ಇರಲಿಲ್ಲ. ಹಿಂದಿನಿಂದ ಹೀಗೆ ನಡೆದುಕೊಂಡು ಬಂದಿದೆ, ಅದನ್ನು ಪಾಲಿಸುವುದು ತಮ್ಮ ಗೃಹಿಣೀಧರ್ಮ ಎನ್ನುವಷ್ಟು ವಿನಮ್ರ ಭಾವನೆ. ‘ಕುಡುಗೋಲು, ಕುಂಬಳಕಾಯಿ’ ಎರಡೂ ಕೈಲಿದ್ದ ಪುರುಷವರ್ಗದವರು ಕುಂಬಳಕಾಯನ್ನು ಎರಡು ತುಂಡು ಮಾಡಿಕೊಟ್ಟುಬಿಟ್ಟರೆ ಅವರ ಕೆಲಸ ಮುಗಿಯಿತು. ಮಿಕ್ಕಂತೆ ಹೆಣ್ಣುಮಕ್ಕಳು ಮೆಟ್ಟುಗತ್ತಿಯ ಮೇಲೆ ಸ್ಥಾಪಿತರಾಗಿ ತಾವು ಮಾಡುವ ಮೇಲೋಗರಕ್ಕೆ ತಕ್ಕ ಆಕಾರದಲ್ಲಿ ಅದನ್ನು ಹೆಚ್ಚಿ ಹೋಳು ಮಾಡಿಕೊಳ್ಳುತ್ತಿದ್ದರು.



ಕುಂಬಳಕಾಯಿ ಅಂದೊಡನೆ ಅರಳುಸಂಡಿಗೆಯ ನೆನಪಾಗದಿರಲು ಸಾಧ್ಯವೇ? ಮಕ್ಕಳಿಗೆ ಬೇಸಿಗೆಯ ರಜ ಬರುತ್ತಿದ್ದಂತೆ ‘ಬಿಸಿಲು ದಂಡ ಮಾಡಬಾರದು’ ಎನ್ನುವ ಮನೋಧರ್ಮದ ನಮ್ಮಮ್ಮನ ಹಪ್ಪಳ, ಸಂಡಿಗೆಯ ಕಾರ್ಖಾನೆ ಶುರುವಾದ ಲೆಕ್ಕ. ಅಡಿಕೆಕೊಯ್ಲಿನ ಹೊತ್ತಿಗೆ ಮನೆಯೆದುರು ಹಾಕಿರುತ್ತಿದ್ದ ಚಪ್ಪರ ಈ ಉದ್ದೇಶಕ್ಕಾಗಿಯೇ ಕಾದು ನಿಂತಿರುತ್ತಿತ್ತು. ಸಣ್ಣಗೆ ಹೆಚ್ಚಿದ ಕುಂಬಳಕಾಯಿ, ಅರಳು ಮಿಶ್ರಣದ, ಇಂಗಿನ ಘಮದ ಅರಳುಸಂಡಿಗೆ ಚಪ್ಪರದ ತಟ್ಟೆಯ ಮೇಲೆ ಎಣ್ಣೆ, ನೀರು ಸವರಿ ಹಾಸಿದ ಬಾಳೆಹೆಡಲಿನ ಮೇಲೆ ಅರೆ ಒಣಗುವುದರೊಳಗೆ ಸುಮಾರಷ್ಟು ಖಾಲಿಯಾಗಿಬಿಡುತ್ತಿತ್ತು. ಹದವಾದ ಉಪ್ಪು, ಸುಂಯ್ಗುಟ್ಟುವಷ್ಟು ಖಾರ ಸೇರ್ಪಡೆಗೊಂಡಿರುತ್ತಿದ್ದ